OS No. 11/2024

DW-1

**(ಇಂದು ದಿಃ 01-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲು ವಾದಿ ಪರ ಃ ಶ್ರೀ TVP ವಕೀಲರಿಂದಃ**

ನನ್ನ ಮುತ್ಯಾನ ಹೆಸರು ಸಿದ್ದಪ್ಪ ಎಂದರೆ ಸರಿ. ಸಿದ್ದಪ್ಪನಿಗೆ ಇಬ್ಬರು ಹೆಂಡತಿಯರು. ಮೊದಲನೆಯ ಹೆಂಡತಿ ನೀಲಮ್ಮ, ಎರಡನೇಯ ಹೆಂಡತಿ ಚೆಂದಮ್ಮ, ನೀಲಮ್ಮರವರಿಗೆ 4 ಜನ ಗಂಡು ಮಕ್ಕಳು , ಒಬ್ಬಳು ಹೆಣ್ಣು ಮಗಳು. ಅವರುಗಳೆಂದರೆ ಶಿವಶರಣಪ್ಪ, ರಾಚಪ್ಪ, ಈರಪ್ಪ , ಮಹಾದೇವಪ್ಪ ಮತ್ತು ಮಾಹದೇವಿ. ಚೆಂದಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣುಮಗಳು . ಅವರುಗಳೆಂದರೆ ಶಂಕ್ರಮ್ಮ, ಗುಂಡಪ್ಪ, ಶಿವಶಂಕರ. ನಾನು 7 ನೇ ತರಗತಿಯವರೆಗೆ ವಿಧ್ಯಾಬ್ಯಾಸ ಮಾಡಿದ್ದೇನೆ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಂದೇ ಈರಪ್ಪ, ನನ್ನ ತಂದೆ ತೀರಿ ಹೋಗಿ 5 ವರ್ಷ ಆಗಿದೆ. ತೀರಿ ಹೋದಾಗ ನನ್ನ ತಂದೆಗೆ ಸುಮಾರು 70 ವರ್ಷ ಆಗಿತ್ತು. ಶಿವಶರಣಪ್ಪ ಹಿರಿಯ ಮಗ ಎಂದರೆ ಸರಿ. ಅವರು ಯಾವಾಗ ತೀರಿ ಹೋದರು ನೆನಪಿಲ್ಲ, ತೀರಿ ಹೋಗಿ ಸುಮಾರು 15 ವರ್ಷ ಆಗಿದೆ. ಶಿವಶರಣಪ್ಪ ರಜಾಕಾರ ದಾಳಿಯ ಮುಂಚೆ ಜನಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುತ್ಯಾ ಸಿದ್ದಪ್ಪ 1930 ರಲ್ಲಿ ಮದುವೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ, ನನ್ನ ಮುತ್ಯಾ ತೀರಿ ಹೋದಾಗ ನಾನು ಜನಸಿದ್ದೆ ಆದರೆ ತೀರಿ ಹೋಗಿದ್ದು ನನಗೆ ನೆನಪು ಇಲ್ಲ.

ಸಿದ್ದಪ್ಪರವರೆ 100 ಎಕರೆ ಜಮೀನು ಇತ್ತು . ಸೇಡಂ ಮತ್ತು ಸತಪತನಹಳ್ಳಿಯಲ್ಲಿ ಇತ್ತು. ಜಮೀನು ಸರ್ವೇ ನಂಬರಗಳನ್ನು ಹೇಳಲು ಆಗುವುದಿಲ್ಲ. ಸೇಡಂ ನ ಸರ್ವೇ 733 , 18 ಮಕರೆ 25 ಗುಂಟೆ, 827, 26 ಎಕರೆ 20 ಗುಂಟೆ , 732 , 13 ಎಕರೆ 23 ಗುಂಟೆ, 752 , 26 ಎಕರೆ 04 ಗುಂಟೆ ಎಂದರೆ ಸರಿ. ಸತಪತನಹಳ್ಳಿಯ ಸರ್ವೇ ನಂ 43 , 26 ಎಕರೆ 34 ಗುಂಟೆ , 15, 23 ಎಕರೆ 33 ಗುಂಟೆ ಎಂದರೆ ಸರಿ. ನನ್ನ ತಾಯಿ ಯ ಹೆಸರಿನಲ್ಲಿ ಮತ್ತು 2ನೇ ಪ್ರತಿವಾದಿ ಯ ಹೆಸರಿನಲ್ಲಿ ಖರೀದಿಸಿದ್ದ ಸರ್ವೇ ನಂಬರ 827, ತಲಾ 6 ಎಕರೆ 25 ಗುಂಟೆ ಹಿರಿಯರ ಜಮೀನು ಎಂದರೆ ಸರಿಯಲ್ಲ, ಮೇಲಿನ ಸರ್ವೇ ನಂಬರ ಜಮೀನುಗಳು ಪೋಡಿ ಆಗಿವೆ. 1980 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ಭಾಗದಂಲ್ಲಿ ನನ್ನ ತಂದೆಗೆ ಸರ್ವೇ ನಂ.733 ರಲ್ಲಿ 9 ಎಕರೆ 32 ಗುಂಟೆ ಮತ್ತು ಸರ್ವೇ ನಂ.827 ರಲ್ಲಿ 13 ಎಕರೆ 10 ಗುಂಟೆ ಭಾಗಕ್ಕೆ ಬಂದಿತ್ತು

ಎಂದರೆ ಸರಿ. ಮಹಾದೇವಪ್ಪನಿಗೆ ಸರ್ವೇ ನಂ. 827 ರಲ್ಲಿ 13 ಎಕರೆ 10 ಗುಂಟೆ ಮತ್ತು 733 ರಲ್ಲಿ 9 ಎಕರೆ 33 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಶಂಕ್ರಪ್ಪನಿಗೆ ಸರ್ವೇ ನಂ.732 ರಲ್ಲಿ 6 ಎಕರೆ 31 ಗುಂಟೆ ಮತ್ತು 752/2 ರಲ್ಲಿ 12 ಎಕರೆ 22 ಗುಂಟೆ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಗುಂಡಪ್ಪನಿಗೆ ಸರ್ವೇ ನಂ. 752/2 ರಲ್ಲಿ 7 ಎಕರೆ 22 ಗುಂಟೆ , 752/1 ರಲ್ಲಿ 5 ಎಕರೆ, 732 ರಲ್ಲಿ 6 ಎಕರೆ 32 ಗುಂಟೆ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಈರಪ್ಪ ಮತ್ತು ಮಹಾದೇವಪ್ಪ ನೀಲಮ್ಮ ಮಕ್ಕಳು ಎಂದರೆ ಸರಿ. ಶಂಕ್ರಪ್ಪ ಮತ್ತು ಗುಂಡಪ್ಪ ಚಂದ್ರಮ್ಮ ನ ಮಕ್ಕಳು ಎಂದರೆ ಸರಿ. ನನ್ನ ದೊಡ್ಡಪ್ಪ ಶಿವಶರಣಪ್ಪನಿಗೆ ಸತಪತನಹಳ್ಳಿಯ ಸರ್ವೇ ನಂ. 43 ರಲ್ಲಿ 26 ಎಕರೆ 34 ಗುಂಟೆ , ರಾಚಪ್ಪನಿಗೆ ಸರ್ವೇ ನಂ. 15 ರಲ್ಲಿ 23 ಎಕರೆ 33 ಗುಂಟೆ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಶಿವಶರಣಪ್ಪ ಮತ್ತು ರಾಚಪ್ಪ ನೀಲಮ್ಮ ಮಕ್ಕಳು ಎಂದರೆ ಸರಿ. ಮೇಲಿನ ವಿಭಾಗದಲ್ಲಿ ನೀಲಮ್ಮನ ಮಕ್ಕಳು ಮತ್ತು ಚಂದ್ರಮನ ಮಕ್ಕಳಿಗೆ ಭಾಗ ನೀಡಿದ್ದಾರೆ ಎಂದರೆ ಸರಿ. ಆ ಪ್ರಕಾರ 1980 ರಲ್ಲ್ಲಿ ಸತಪತನಹಳ್ಳಿ ಜಮೀನು ಸಂಬಂಧ ಮುಟೇಷನ ಆಗಿದೆ ಎಂದರೆ ಸರಿ. ಅವರವರ ಭಾಗಕ್ಕೆ ಬಂದ ಜಮೀನುಗಳು ಅವರವರ ಹೆಸರಿಗೆ ಮುಟೇಷನ್ ಆಗಿದ್ದವು ಎಂದರೆ ಸರಿ. ಅದರಂತೆ ಅವರವರು ಕಬ್ಜಾದಲ್ಲಿದ್ದಾರೆ ಎಂದರೆ ಸರಿ .

ನನ್ನ ತಂದೆ ಈರಪ್ಪ, ನನ್ನ ತಾಯಿ ನಾಗಮಣಿ ಎಂದರೆ ಸರಿ. ನನ್ನ ತಂದಗೆ ನಾವು 4 ಜನ ಮಕ್ಕಳು. ಅವರುಗಳೆಂದರೆ ವಾದಿ , 1 ರಿಂದ 3 ನೇ ಪ್ರತಿವಾದಿಯರು ಎಂದರೆ ಸರಿ. ಮಹಾದೇವಪ್ಪ ನನ್ನ ಚಿಕ್ಕಪ್ಪ, ಮಹಾದೇವಪ್ಪ ತನ್ನ ಕುಟುಂಬದ ಅವಶ್ಯಕತೆಗಾಗಿ ಸರ್ವೇ ನಂ. 827/ಬಿ ರಲ್ಲಿ 13 ಎಕರೆ 10 ಗುಂಟೆ ಪೈಕಿ 6 ಎಕರೆ 25 ಗುಂಟೆ ಜಮೀನನ್ನು ನನ್ನ ತಾಯಿಗೆ , 2ನೇ ಪ್ರತಿವಾದಿಗೆ 6 ಎಕರೆ 25 ಗುಂಟೆ ನೋಂದಾಯಿತು ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಹಾದೇವಪ್ಪ 6 ಎಕರೆ 25 ಗುಂಟೆ ನನಗೆ ಮಾರಾಟ ಮಾಡಿದ್ದರು , ಆದರೆ ಖರೀದಿ ಪತ್ರ ನನ್ನ ತಮ್ಮ ನ ಹೆಸರಿಗೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಖರೀದಿ ಆದಾಗ ನನ್ನ ತಂದೆ ಬದುಕಿದ್ದರು. 2ನೇ ಪ್ರತಿವಾದಿಗೆ ಏನು ಕೆಲಸ ಇಲ್ಲ, ನನ್ನ ತಾಯಿಗೆ ಯಾವುದೇ ಆಧಾಯ ಇಲ್ಲ, ಮೇಲಿನ ಜಮೀನುಗಳನ್ನು ನನ್ನ ತಂದೆ ಒಟ್ಟು ಕುಟುಂದದ ಜಮೀನುಗಳಿಂದ ಬಂದ ಆಧಾಯದಿಂದ

ನನ್ನ ತಾಯಿ ಮತ್ತು 2ನಂೀ ಪ್ರತಿವಾದಿ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನುಗಳನ್ನು ನನ್ನ ತಾಯಿಯ ತಂದೆ ತಾಯಿ ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿಯ ತಂದೆ ತಾಯಿ ಖರೀದಿ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ. ಅಣ್ಣಪ್ಪ ಗೌಡ ನನ್ನ ತಾಯಿಯ ಸಹೋದರ. ಆತ ಖರೀದಿ ಪತ್ರಕ್ಕೆ ಸಹಿ ಮಾಡಿದ್ದಾರೆ. ನನ್ನ ತಾಯಿಯ ತಂದೆ ತಾಯಿ ಶ್ರೀಮಂತ ಕುಟುಂಬದವರು ಮತ್ತು ಅವರು ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಹೆಸರಿಗೆ ಜಮೀನು ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆ ತಾಯಿ ಖರೀದಿ ಮಾಡಿದ ಬಗ್ಗೆ ಸಾಕ್ಷಿ ಮತ್ತು ಆಧಾರ ಇಲ್ಲ.

ನನ್ನ ತಂದೆಯ ಭಾಗಕ್ಕೆ ಬಂದಿದ್ದ ಸರ್ವೇ ನಂ. 733, 827 ಮತ್ತು 827 ಮತ್ತು ಮೇಲಿನ ನನ್ನ ತಾಯಿ ಮತ್ತು 2ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ ಜಮೀನುಗಳಲ್ಲಿ ಇಲ್ಲಿಯವರೆಗೆ ವಾದಿಗೆ ಯಾವುದೇ ಭಾಗ ಕೊಟ್ಟಿಲ್ಲ. ದಾವಾ ಮನೆಯಲ್ಲಿ ಕೂಡ ವಾದಿಗೆ ಭಾಗ ಕೊಟ್ಟಿಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಇದೆ ಎಂದರೆ ಕಾನೂನು ಪ್ರಕಾರ ಕೋಡಬೇಕಾದರೆ ಕೋಡುತ್ತೇವೆ ಎಂದು ಹೇಳುತ್ತಾರೆ. ನನ್ನ ತಾಯಿ ಮತ್ತು 1 ರಿಂದ 3 ನೇ ಪ್ರತಿವಾದಿಯರು ಸರ್ವೇ ನಂ.733/2 ರಲ್ಲಿ ನ ಜಮೀನು ಸಂಬಂಧ ಭಾಗ ಮೊಡಿಕೊಂಡಿದ್ದೇವೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರಿಗೆ ಭಾಗ ಬಂದಿದೆ ಎಂದರೆ ಸರಿ. ವಾದಿಗೆ ಅದರಲ್ಲಿ ಭಾಗ ಕೊಟ್ಟಿಲ್ಲ ಎಂದರೆ ಸರಿ. ಕವಿತಾ 2ನೇ ಪ್ರತಿವಾದಿ ಹೆಂಡತಿ. 2ನೇ ಪ್ರತಿವಾದಿ ಸರ್ವೇ ನಂ. 733/3 , 3 ಎಕರೆ 10 ಗುಂಟೆ ಜಮೀನನ್ನು ತನ್ನ ಹೆಂಡತಿ 4 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಪ್ರಕಾರ ದಾನ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ನನ್ನ ತಾಯಿಯ ಕಡೆಯಿಂದ ನನ್ನ ಮಗ 5 ನೇ ಪ್ರತಿವಾದಿಗೆ ಸರ್ವೇ ನಂ. 827/2 ರಲ್ಲಿ 3 ಎಕರೆ 29 ಗುಂಟೆ ನೋಂದಾಯಿತು ದಾನ ಪತ್ರದ ಮೂಲಕ ದಾನ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರೆದು ನನ್ನ ತಾಯಿ 5 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದು ಹೇಳುತ್ತಾರೆ. ಬೇರೆ ಯಾರಿಗೂ ಗೊತ್ತಾಗದ ರೀತಿಯಲ್ಲಿ ನನ್ನ ತಾಯಿಗೆ ಮೊಸ ಮಾಡಿ ನಾನೇ 5ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರ

ಆದ 45 – 60 ದಿನಕ್ಕೆ ನನ್ನ ತಾಯಿ ತೀರಿ ಹೋಗಿದ್ದಾರೆ ಎಂದರೆ ಸರಿ. ನನ್ನ ತಾಯಿಗೆ ಲಕ್ವಾ ಆಗಿತ್ತು ಎಂದರೆ ಸರಿ. ಸಾಯುವ 6 ತಿಂಗಳ ಮುಂಚೆ ಲಕ್ವಾ ಅಗಿತ್ತು ನನ್ನ ತಾಯಿಗೆ ಲಕ್ವಾ ಆಗಿದ್ದಾಗ ಅವಳಿಗೆ ಸರಿಯಾದ ಜ್ಞಾನ ಇರಲಲ್ಲ ಅದನ್ನು ದುರುಪಯೋಗ ಪಡಿಸಿಕೊಂಡು ದಾನ ಪತ್ರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ, ವಿಭಾಗ ಪತ್ರ ಮತ್ತು ದಾನ ಪತ್ರಗಳಿಗೆ ವಾದಿ ಸಹಿ ಮಾಡಿಲ್ಲ, ವಿಭಾಗ ಪತ್ರ ಮತ್ತು ದಾನ ಪತ್ರಗಳನ್ನು ವಾದಿಗೆ ಗೊತ್ತಾಗದ ರೀತಿಯಲ್ಲಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವಾದಿ ಹೇಳಿದ ಮೇರೆಗೆ ನನ್ನ ತಾಯಿ ದಾನ ಪತ್ರ ಗಳನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಾನ ಪತ್ರ ಮಾಡಿಕೊಡುವಂತೆ ವಾದಿ ನನ್ನ ತಾಯಿಗೆ ಹೇಳಿದರು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ.

ನನ್ನ ತಾಯಿಅವಳ ಹೆಸರಿನಲ್ಲಿದ್ದ 6 ಎಕರೆ 25 ಗುಂಟೆ ಪೈಕಿ , 2 ಎಕರೆ 36 ಗುಂಟೆ ಜಮೀನನ್ನು ಒಬ್ಬ ನರೇಂದ್ರರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಮಗೆ ಗೊತ್ತಾಗಿಲ್ಲದ ಆಗೇ ಮಾರಾಟ ಮಾಡಿದ್ದಾಳೆ ಎಂದು ಹೇಳುತ್ತಾರೆ. 2ನೇ ಪ್ರತಿವಾದಿ 3 ಎಕರೆ 20 ಗುಂಟೆ ಜಮೀನನ್ನು ರಾಮಚಂದ್ರರವರಿಗೆ ಮಾರಾಟ ಮಾಡಿದ್ದಾರೆ ಸರಿ . ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದ ಆಗೇ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಕುಟುಂಬದ ಅವಶ್ಯಕತೆಗಾಗಿ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ಖರೀದಿ ಪತ್ರಗಳು ಆದ 15 ದಿನಕ್ಕೆ ಖರೀದಿ ಪತ್ರಗಳ ಬಗ್ಗೆ ನನಗೆ ಗೊತ್ತಾಯಿತು. ಗೊತ್ತಾದ ನಂತರ ಮಾರಾಟ ಮಾಡಿದ್ದು ತಪ್ಪು ಸದರಿ ಜಮೀನುಗಳಲ್ಲಿ ನನಗೆ ಭಾಗ ಇದೆ ಎಂದು ನಾನು ದಾವೆ ಹಾಕಿಲ್ಲ, ನಾನು ಈ ದಾವೆಯ ನನ್ನ ತಕರಾರಿನಲ್ಲಿ ಮಾರಾಟ ಮಾಡಿದ್ದು ಸರಿಯಲ್ಲ ಎಂದು ಹೇಳಿ ಬರೆಸಿದ್ದೇನೆ.

ಮನೆಯಲ್ಲಿ 3 ಜನ ಸಹೋದರರು ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಮನೆಯಲ್ಲಿ ಕೂಡ ವಾದಿಗೆ ಭಾಗ ಕೊಟ್ಟಿಲ್ಲ ಎಂದರೆ ಸರಿ. ನನ್ನ ತಂದೆ ಭಾಗಕ್ಕೆ ಬಂದಿದ್ದ ಆಸ್ತಿಗಳಲ್ಲಿ ಮತ್ತು ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಿದ ಜಮೀನುಗಳಲ್ಲಿ 1 ರಿಂದ 3 ನೇ ಪ್ರತಿವಾದಿಯರ ಸಮನಾಗಿ ವಾದಿಗೆ ಕೂಡ ಭಾಗ ಇದೆ ಎಂದರೆ ಸರಿ.

OS No. 11/2024

DW-1

ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದೆ ಇದ್ದಾಗ ನಾನು ವ್ಯವಸ್ಥ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗ 5ನೇ ಪ್ರತಿವಾದಿ ವ್ಯವಸ್ಥ ಮಾಡಿದ್ದಾರೆ ಎಂದು ಹೇಳುತ್ತಾರೇ. ನಾನು ಹಿರಿಯ ಮಗನಾಗಿ ನನ್ನ ತಾಯಿಯ ಅಂತ್ಯಕ್ರೀಯೆ ಮಾಡಿದ್ದೇನೆ ಎಂದರೆ ಸರಿ. ನನಗೆ ಮತ್ತು ನನ್ನ ಮಗನಿಗೆ ಲಿಂಗ ಹಾಕಿ ಅಂತ್ಯಕ್ರೀಯೆ ಮಾಡಲು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಭಾಗ ಕೋಡಬೇಕಾಗುತ್ತದೆ ಎಂದು ನನ್ನ ತಾಯಿ ಸ್ವಹ ಇಚ್ಛೆಯಿಂದ ದಾನ ಪತ್ರ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಜಮೀನು ಮಾರಾಟ ಮಾಡಿದ್ದನ್ನು ಪ್ರಶ್ನೆ ಮಾಡಿ ಇಲ್ಲಿಯವರೆಗೆ ನಾನು ಯಾವುದೇ ದಾವೆ ಸಲ್ಲಿಸಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**